ಇ) 2002-03ನೇ ಸಾಲಿನ ಆಯವ್ಯಯದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳಲಾಗಿರುವುದಿಲ್ಲ.

| ವರ್ಷ | ಕ್ರ.ಸಂ. | ಕಾಮಗಾರಿಯ ಹೆಸರು | ಬಿಡುಗಡೆ ಮಾಡಲಾದ ಹಣ ರೂ. ಲಕ್ಷಗಳಲ್ಲಿ |
|---|---|---|---|
| 1999-2000 | 1. | ದೊಡ್ಡಬಳ್ಳಾಪುರ ತಾಲ್ಲೂಕು ಗಜ್ಜಗದಹಳ್ಳಿಯಿಂದ ಬೈರಸಂದ್ರದವರೆಗೆ ಧಾರಣೆ ಹಾಗೂ ಡಾಂಬರೀಕರಣ | 0.15 |
| | 2. | ದೊಡ್ಡಬಳ್ಳಾಪುರ ತಾಲ್ಲೂಕು ಹೊನ್ನಾವರದಿಂದ ಪುರಪ್ಪನಹಳ್ಳಿಗೆ ಜಲ್ಲಿ ಹಾಗೂ ಡಾಂಬರೀಕರಣ | 0.10 |
| | 3. | ಕೊಡಿಗೇನಹಳ್ಳಿ ಕನೀನಹಳ್ಳಿ ರಸ್ತೆಯಲ್ಲಿ ಮರು ಜಲ್ಲಿ ಹಾಗೂ ಡಾಂಬರೀಕರಣ (3 ಲಕ್ಷದ ಕಾರ್ಯಕ್ರಮ) | 0.15 |
| 2000-2001 | 1. | ಕೊಡಿಗೇಹಳ್ಳಿ ಕನ್ನೀನಹಳ್ಳಿ ರಸ್ತೆಯಲ್ಲಿ ಜಲ್ಲಿ ಹಾಗೂ ಡಾಂಬರೀಕರಣ (30 ಲಕ್ಷದ ಕಾರ್ಯಕ್ರಮ ಮುಂದುವರೆದ ಕಾಮಗಾರಿ) | 0.03 |
| 2001-2002 | 1 | ಕೊಡಿಗೇನಹಳ್ಳಿ ಕನ್ನೀನಹಳ್ಳಿ ರಸ್ತೆಯಲ್ಲಿ ಮರು ಜಲ್ಲಿ ಹಾಗೂ ಡಾಂಬರೀಕರಣ (30 ಲಕ್ಷದ ಕಾರ್ಯಕ್ರಮ ಮುಂದುವರಿದ ಕಾಮಗಾರಿ) | 0.41 |

**ಶ್ರೀರಂಗಪಟ್ಟಣ-ಬೀದರ್ ರಸ್ತೆ ಕಾಮಗಾರಿ**

230 (494) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀರಂಗಪಟ್ಟಣ ಬೀದರ್ ರಸ್ತೆ (ಎನ್.ಹೆಚ್) ಕಾಮಗಾರಿ ಯಾವ ಹಂತದಲ್ಲಿದೆ?

ಆ) ಟೆಂಡರ್ ಯಾವಾಗ ಕರೆಯಲಾಗುವುದು?

ಇ) ಎಷ್ಟು ಹಂತಗಳನ್ನು ಮಾಡಲಾಗುವುದು?

ಈ) ಟೆಂಡರ್ ಕರೆದ ನಂತರ ಎಷ್ಟು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವುದು? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಬೀದರ್ ನಿಂದ ಹತ್ತಿಗೂಡೂರು 189 ಕಿಮೀ ಪ್ರಾರಂಭವಾಗಿದೆ. ಹತ್ತಿಗುಡೂರ್ನಿಂದ ಲಿಂಗಸುಗೂರು 68 ಕಿಮೀ ಕೆಲಸ ಪ್ರಾರಂಭವಾಗಿದೆ. ಲಿಂಗಸೂರುನಿಂದ ಸಿಂಧನೂರು 56

ಕಿ.ಮೀ. ಕೆಲಸ ಪ್ರಾರಂಭರಾಗಿದೆ. ಕಿಬ್ಬನಹಳ್ಳಿಂದ ಹುಳಿಯಾಲ್ 37 ಕಿಮೀ ಕೆಲಸವು ಪ್ರಾರಂಭವಾಗಿದ್ದು 15 ಕಿಮೀ ಕೆಲಸ ಪೂರ್ತಿಯಾಗಿದೆ.

ಅ) ಇನ್ನೂ ಈ ಕೆಳಗಿನ 3 ಪ್ಯಾಕೇಜ್‌ಗಳ ಟೆಂಡರ್‌ನ್ನು 10-7-2002 ರಂದು ಕರೆಯಲಾಗಿದೆ.

ಶ್ರೀ ರಂಗಪಟ್ಟಣ-ಚೀನ್ಯ 31 ಕಿ.ಮೀ.

ಚೀನ್ಯ-ನೆಲ್ಲಿಗೆರೆ 32 ಕಿಮೀ

ನೆಲ್ಲಿಗೆರೆ-ಕಿಬ್ಬನಹಳ್ಳಿ ಕ್ರಾಸ್ 47 ಕಿ.ಮೀ

ಆ) ಈ ರಸ್ತೆ 732 ಕಿಮೀ ಉದ್ದ ಇರುವ ಕಾರಣ 11 ಹಂತಗಳಲ್ಲಿ ಮಾಡಲಾಗುವುದು.

2003-04 ರಲ್ಲಿ ಕೈಗೆತ್ತಿಕೊಂಡು-ಡಿಸೆಂಬರ್ 2006ರಲ್ಲಿ ಪೂರ್ತಿಗೊಳಿಸಲಾಗುವುದು.

ಈ) ಟೆಂಡರ್‌ನ್ನು 60 ದಿನಗಳ ಕಾಲವಧಿಯಲ್ಲಿ ಟೆಂಡರ್ ಭರ್ತಿ ಮಾಡುವ ಅವಕಾಶವಿದೆ. ಆ ಟೆಂಡರ್‌ಗಳನ್ನು 90 ರಿಂದ 120 ದಿನಗಳ ಅವಧಿಯಲ್ಲಿ ಮೌಲ್ಯಮಾಪನ ಮಾಡಿ ವಿಶ್ವ ಬ್ಯಾಂಕ್‌ನ ಪರವಾನಗಿ ನಂತರ ಗುತ್ತಿಗೆದಾರರನ್ನು ನೇಮಿಸಲಾಗುವುದು. ಕಾಮಗಾರಿಗಳನ್ನು ಪೂರ್ಣಗೊಳಿಸಲು 30 ರಿಂದ 35 ಕಿ.ಮೀ.ಗೆ ಒಂದು ವರ್ಷ ಅವಧಿಯ ಆಧಾರದ ಮೇಲೆ ಕಾಮಗಾರಿ ಪೂರ್ಣಗೊಳಿಸುವ ಸಮಯವನ್ನು ನಿಗದಿಪಡಿಸಿ ಕೊಳ್ಳಲಾಗುವುದು. ಆದರಂತೆ ಪ್ಯಾಕೇಜನ ಉದ್ದಕ್ಕನುಗುಣವಾಗಿ 12 ರಿಂದ 18 ತಿಂಗಳುಗಳ ಅವಧಿಯನ್ನು ನಿಗದಿಪಡಿಸಲಾಗಿದೆ.

## ಮಾಯಸಂದ್ರ ಹೋಬಳಿ ಮಲ್ಲದೇವನಹಳ್ಳಿ ಅರಣ್ಯ ಜಾಗದ ಅಕ್ರಮ ಒತ್ತುವರಿ

231 (600) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ ಮಲ್ಲದೇವನಹಳ್ಳಿ ಗ್ರಾಮದ ಬಳಿ ಇರುವ ಅರಣ್ಯವನ್ನು ಅಕ್ರಮ ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಕ್ರಮ ಒತ್ತುವರಿ ಮಾಡಿರುವ ಜನರ ಹೆಸರೇನು?

ಇ) ಇವರುಗಳ ಮೇಲೆ ಯಾವ ಕ್ರಮ ಜರುಗಿಸಲಾಗಿದೆ?

ಈ) ಅಕ್ರಮ ಕಾಡನ್ನು ಕಡಿದು ಭೂಮಿ ಒತ್ತುವರಿ ಮಾಡಿದರೆ ಯಾವ ಶಿಕ್ಷೆ ವಿಧಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು.

ಆ)1. ಮೋಹನ್‌ಮೂರ್ತಿ ಬಿನ್ ಕರಿಯಯ್ಯ ಮಲ್ಲದೇವನಹಳ್ಳಿ

2. ವೆಂಕಟರಾಮಯ್ಯ ಬಿನ್ ಲಕ್ಷ್ಮಯ್ಯ, ಮಲ್ಲದೇವನಹಳ್ಳಿ.